**ಪಿ.ಡಬ್ಲ್ಯೂ-01**

**ಸಾಕ್ಷಿಯನ್ನು ದಿನಾಂಕಃ 21.12.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ. ಸಿ.ಪಿ. ವಕೀಲರಿಂದಃ**

ನನ್ನ ಮತ್ತು ಎದುರುದಾರರ ನಡುವೆ ವಿವಾಹ ಆಗಿರುವ ಬಗ್ಗೆ ನಾನು ವಿವಾಹ ನೋಂದಾವಣಿ ಪತ್ರ ಮತ್ತು 02 ಮದುವೆ ಫೋಟೋಗಳನ್ನು ಹಾಜರುಪಡಿಸುತ್ತಿದ್ದೇನೆ. ಮದುವೆ ನೋಂದಾವಣಿ ಪತ್ರವನ್ನು **ನಿ.ಪಿ.-1**, ಮದುವೆ ಫೋಟೋಗಳನ್ನು **ನಿ.ಪಿ.-2 ಮತ್ತು ನಿ.ಪಿ.-3** ಎಂದು ಗುರುತಿಸಲಾಯಿತು. ಎದುರುದಾರರ ಕುಟುಂಬಕ್ಕೆ ಸಂಬಂಧಿಸಿದ ಜಮೀನಿನ ಪಹಣಿ ಪತ್ರಿಕೆಯನ್ನು ಹಾಜರುಪಡಿಸುತ್ತಿದ್ದೇನೆ. ಪಹಣಿ ಪತ್ರಿಕೆಯನ್ನು **ನಿ.ಪಿ.-4** ಎಂದು ಗುರುತಿಸಲಾಯಿತು. ಎದುರುದಾರರು ಮೇಟಿಕುಪ್ಪೆ ವನ್ಯಜೀವಿ ಅರಣ್ಯದಲ್ಲಿ ವಾಚರ್ ಆಗಿ ಕೆಲಸ ಮಾಡುತ್ತಿದ್ದು, ಈ ಸಂಬಂಧ ಅವರಿಗೆ ಸೇರಿದ ವೇತನ ಪತ್ರವನ್ನು ಹಾಜರುಪಡಿಸುತ್ತಿದ್ದೇನೆ. ವೇತನ ಪತ್ರವನ್ನು **ನಿ.ಪಿ.-5** ಎಂದು ಗುರುತಿಸಲಾಯಿತು. ಆದ್ದರಿಂದ ನಾನು ಘನ ನ್ಯಾಯಾಲಯದಲ್ಲಿ ಕೇಳಿಕೊಳ್ಳುವುದೇನೆಂದರೆ ನನಗೆ ಮತ್ತು 2 ನೇ ಅರ್ಜಿದಾರರಿಗೆ ಸೇರಿಸಿ ಮಾಸಿಕ ರೂ. 20,000/- ಜೀವನಾಂಶ ಕೊಡುವಂತೆ ಆದೇಶ ಮಾಡಿಕೊಡಬೇಕಾಗಿ ನ್ಯಾಯಾಲಯದಲ್ಲಿ ಬೇಡಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಎದುರುದಾರರು ಪಾಟೀ ಸವಾಲಿಗಾಗಿ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಲಾಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**C/c 1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**